ಸಾಕ್ಷಿಯನ್ನು ದಿನಾಂಕಃ **10-09-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಸಿ ಜಿ., ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಕುರಿತು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತದೆ.

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಮೆಡಿಕಲ್ ಡಾಕ್ಯುಮೆಂಟಿನ ಎರಡು ಮೂಲ ಪ್ರತಿಗಳನ್ನು **ನಿಪಿ.1 ಮತ್ತು 2** ಎಂದು, ದಿಃ 03-11-2024 ರ ಜಿ ಪಿ ಎ ಪ್ರತಿಯನ್ನು **ನಿಪಿ.3** ಎಂದು, ಫಾರ್ಮ ನಂ.2 ಎ ಇದರ ಪ್ರತಿಯನ್ನು **ನಿಪಿ.4** ಎಂದು, ದಿಃ 22-10-1984 ರ ತಾಲ್ಲೂಕು ಭೂ ನ್ಯಾಯ ಮಂಡಳಿ ಹೊನ್ನಾವರ ಇದರ ಆದೇಶ ಪ್ರತಿಯನ್ನು **ನಿಪಿ.5** ಎಂದು, ದಿಃ 28-03-1985 ರ ಅಕ್ಯುಪೆನ್ಸಿ ಪತ್ರ ಇದರ ದೃಡೀಕೃತ ನಕಲನ್ನು **ನಿಪಿ.6** ಎಂದು, ಎಂ ಆರ್ ಎಂಟ್ರಿ ನಂ.1009 ಇದರ ದೃಢೀಕೃತ ನಕಲನ್ನು **ನಿಪಿ.7** ಎಂದು, ದಾವಾ ಸ್ಥಳದ ಮೂರು ಕೈಬರಹದ ಪಹಣಿ ಪತ್ರಿಕೆ ಇವುಗಳನ್ನು ಕ್ರಮವಾಗಿ **ನಿಪಿ.8 ರಿಂದ 10** ಎಂದು, ವಾರಸಾ ಎಂಟ್ರಿ ಸಂಖ್ಯೆ 1175 ಇದನ್ನು **ನಿಪಿ. 11** ಎಂದು, ದಿಃ 05-12-1997 ರ ತೊಂಡಿ ವಿಭಜನಾ ದಸ್ತು ಇದನ್ನು **ನಿಪಿ.12** ಎಂದು, ಆರೊಳ್ಳಿ ಮುಂಡಗೋಡ ಗ್ರಾಮ ಲೆಕ್ಕಾಧಿಕಾರಿ ಇವರಿಗೆ ನೀಡಿದ ಅರ್ಜಿಯನ್ನು **ನಿಪಿ.13** ಎಂದು, ದಾವಾ ಸ್ಥಳದ ಮೂರು ಪಹಣಿ ಪತ್ರಿಕೆ ಇವುಗಳನ್ನು ಕ್ರಮವಾಗಿ **ನಿಪಿ.14 ರಿಂದ 16** ಎಂದು, ದಾವಾಸ್ತಿಗೆ ಸಂಬಂಧಿಸಿದ ಮೂರು ಮ್ಯುಟೇಶನ್ ಪ್ರತಿಗಳನ್ನು ಕ್ರಮವಾಗಿ **ನಿಪಿ.17 ರಿಂದ 19** ಎಂದು, ದಾವಾಸ್ತಿಗೆ ಸಂಬಂಧಿಸಿದ ಐದು ಪಹಣಿ ಪತ್ರಿಕೆ ಇವುಗಳನ್ನು ಕ್ರಮವಾಗಿ **ನಿಪಿ.20 ರಿಂದ 24** ಎಂದು, ದಾವಾಸ್ತಿಗೆ ಸಂಬಂಧಿಸಿದ ಎರಡು ಆಕಾರಬಂದ್ ಇವುಗಳನ್ನು **ನಿಪಿ.25 ಮತ್ತು 26** ಎಂದು, ಐದು ಹಿಸ್ಸಾ ಮ್ಯಾಪ್ ಇವುಗಳನ್ನು **ನಿಪಿ27 ರಿಂದ 31** ಎಂದು, ಎರಡು ಕೆಡಿಟಿ ಎಂಟ್ರಿ ಇವುಗಳನ್ನು **ನಿಪಿ.32 ಮತ್ತು 33** ಎಂದು, ಸರ್ವೇ ನೋಟೀಸನ್ನು **ನಿಪಿ.34** ಎಂದು, ಹೇಳಿಕೆ ಇದನ್ನು **ನಿಪಿ.35** ಎಂದು, ಹೌಸ್ ಟ್ಯಾಕ್ಸ ರಶೀದಿ ಇದನ್ನು **ನಿಪಿ.36** ಎಂದು, ವಿದ್ಯುತ್ ಬಿಲ್ ಇದನ್ನು **ನಿಪಿ.37** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪ್ರಮಾಣ ಪತ್ರದಲ್ಲಿ ಹಾಗೂ ದಾವಾ ಪತ್ರದಲ್ಲಿ ಹಾಗೂ ಜಿ ಪಿ ಎ ಇದರಲ್ಲಿ ಇರುವ ಸಹಿಗಳು ನನ್ನದೇ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**